<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>

ಸಿ. ಸಿ. ನಂ. 463/2018

ಸಿಡಬ್ಲ್ಯೂ-7 ಪಿಡಬ್ಲ್ಯೂ-4

| | |
|---|---|
| ಹೆಸರುಃ | ಶ್ರೀಮತಿ ಅನಿತಾ |
| ತಂದೆ ಹೆಸರುಃ | ಅಂಜಯ್ಯ |
| ವಯಸ್ಸುಃ | 29 ವರ್ಷ |
| ಉದ್ಯೋಗಃ | ಹೋಮಗಾರ್ಡ, ಸೇಡಂ |
| ವಾಸ ಸ್ಥಳಃ | ಸೇಡಂ |

ದಿನಾಂಕ 22-12-2023

ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>

ನಾನು 2018 ರಿಂದ ಇಲ್ಲಿಯವರೆಗೂ ಸೇಡಂ ಪೋಲಿಸ್ ಠಾಣೆಯಲ್ಲಿ ಹೊಮ್‌ಗಾರ್ಡ ಅಂತಾ ಸೇವೆ ಸಲ್ಲಿಸುತ್ತಿರುತ್ತೇನೆ. ಈ ಅವಧಿಯಲ್ಲಿ ದಿನಾಂಕ 06.04.2018 ರಂದು ಠಾಣಾ ಕರ್ತವ್ಯದಲ್ಲಿ ಇದ್ದಾಗ ಸೇಡಂ ಪಟ್ಟಣದ ದೊಡ್ಡ ಅಗಸಿ ಏರಿಯಾದಲ್ಲಿ ನಮ್ಮ ಸಾಹೇಬರಾದ ಶ್ರೀ ಪೃತ್ವಿರಾಜ ಇವರಿಗೆ ಅಕ್ರಮವಾಗಿ ಸೇಂದಿ ಮಾರಾಟ ಮಾಡುತ್ತಿದ್ದಾರೆ ಅಂತಾ ಖಚಿತ ಮಾಹಿತಿ ಬಂದಿದ್ದು ಆಗ 02.30 ಗಂಟೆಗೆ ನಮ್ಮ ಸಿಬ್ಬಂದಿಯವರಾದ ವಿಠಲರೆಡ್ಡಿ, ಸುನೀಲಕುಮಾರ ಸಿಪಿಸಿ 1040, ಗೀತಾ ಮಹಿಳಾ ಪಿಸಿ ಇವರನ್ನು ಮತ್ತು ಪಂಚರಾದ ಚಾಸಾ-2 ಮತ್ತು 3 ಇವರನ್ನು ಕರೆದುಕೊಂಡು ಬಾತ್ಮಿ ಬಂದ ಸ್ಥಳಕ್ಕೆ ಒಂದು ಖಾಸಗಿ ವಾಹನದಲ್ಲಿ ಹೋಗಿದ್ದು ಆಗ ದೊಡ್ಡ ಅಗಸಿ ಏರಿಯಾದಲ್ಲಿ ಸಾರ್ವಜನಿಕ ಸ್ಥಳದಲ್ಲಿ ಇಬ್ಬರೂ ಹೆಣ್ಣು ಮಕ್ಕಳು ಸಾರ್ವಜನಿಕರಿಗೆ ಅಕ್ರಮವಾಗಿ ಸೇಂದಿ ಮಾರಾಟ ಮಾಡುತ್ತಿದ್ದರು. ಆಗ ನಾವೆಲ್ಲರೂ ಮತ್ತು ಪಂಚರ ಸಹಾಯದೊಂದಿಗೆ ದಾಳಿ ಮಾಡಿದ್ದು ಆ ಇಬ್ಬರೂ ಹೆಣ್ಣು ಮಕ್ಕಳನ್ನು ಹಿಡಿದು ಅವರ ಹೆಸರು ವಿಳಾಸ ವಿಚಾರಿಸಿದ್ದು, ಅವರ ಹತ್ತಿರ 25 ಸೇಂದಿ ಪಾಕೇಟುಗಳು ಇದ್ದವು ಮತ್ತು ಅವುಗಳನ್ನು ಅಕ್ರಮ ಲಾಭಕ್ಕಾಗಿ ಅವರು ಮಾರಾಟ ಮಾಡುತ್ತಿದಿದ್ದು ಕಂಡುಬಂದಿರುತ್ತದೆ. ಆಗ ನಮ್ಮ ಸಾಬಹೇರು ಸಿಕ್ಕ ಸೇಂದಿ ಪಾಕೇಟಗಳಿಂದ ಒಂದು ಸೇಂದಿ ಪಾಕೇಟನ್ನು ಜಪ್ತಿ ಮಾಡಿ ಉಳಿದ 24 ಸೇಂದಿ ಪಾಕೇಟುಗಳನ್ನು ತಮ್ಮ ತಾಬಾಕ್ಕೆ ತೆಗೆದುಕೊಂಡು ಘಟನಾ ಸ್ಥಳದಲ್ಲಿಯೇ ಮದಾಹ್ನ 03.00 ರಿಂದ 04.00 ಗಂಟೆಯವರೆಗೆ ಪಂಚನಾಮೆ ಬರೆದು ಮುಗಿಸಿ ಸಿಕ್ಕ ಮಾಲುಗಳು ಮತ್ತು ಆರೋಪಿತರನ್ನು ವಶಕ್ಕೆ ಪಡೆದು ಠಾಣೆಗೆ ಬಂದು ಠಾಣಾಧಿಕಾರಿಗಳಿಗೆ ವರದಿ ಸಲ್ಲಿಸಿರುತ್ತಾರೆ. ನ್ಯಾಯಾಲಯದ ಮುಂದಿರುವ ಮು.ಮಾ.ನ್ನು ಗುರುತಿಸುತ್ತೇನೆ. ಘಟನೆಯ ಬಗ್ಗೆ ತನಿಖಾಧಿಕಾರಿಯವರಿಗೆ ಹೇಳಿಕೆ

ನೀಡಿರುತ್ತೇನೆ. ಆರೋಪಿತರನ್ನು ನೋಡಿದ್ದಲ್ಲಿ ಗುರುತಿಸುತ್ತೇನೆ.

**ಪಾಟೀ ಸವಾಲುಃ ಶ್ರೀ ಬಿ. ಎಸ್. ಡಿ. ಆರೋಪಿತರ ಪರ ವಕೀಲರಿಂದ**

ಸೇಡಂದ ಚೌರಸ್ತಾದಿಂದ ದೊಡ್ಡ ಅಗಸಿಯವರೆಗಿನ ಪ್ರದೇಶವನ್ನು ದೊಡ್ಡ ಅಗಸಿ ಅಂತಾ ಕರೆಯುತ್ತಾರೆ ಎಂದರೆ ಸರಿ. ಘಟನಾ ಸ್ಥಳವು ಸಾರ್ವಜನಿಕರ ಮನೆಗಳಿಂದ ಸುತ್ತವರೆದ ಪ್ರದೇಶ ಎಂದರೆ ಸರಿ. ನಾವು ದಾಳಿಗೆಂದು ಹೋದಾಗ ಅಲ್ಲಿ ಸಾರ್ವಜನಿಕರು ಯಾರು ಇರಲಿಲ್ಲ. ನಾವು ದಾಳಿಗೆಂದು ಹೋದ ಮನೆ ಆರೋಪಿತರದೇ ಇರುತ್ತದೆ ಎಂಬ ಬಗ್ಗೆ ಸಾರ್ವಜನಿಕರಲ್ಲಿ ನಮ್ಮ ಸಾಹೇಬರು ವಿಚಾರಣೆ ಮಾಡಿರುತ್ತಾರೆ. ಹಾಗೇ ಆ ಸಾರ್ವಜನಿಕರ ಹೆಸರು ನನಗೆ ಹೇಳಲು ಬರುವುದಿಲ್ಲ. ಘಟನಾ ಸ್ಥಳ ಸಾರ್ವಜನಿಕರ ಓಡಾಟದಿಂದ ಕೂಡಿದ ಸ್ಥಳ ಎಂದರೆ ಸರಿ. ನಮ್ಮ ಸಾಹೇಬರು ಹಾಗೇ ಸಾರ್ವಜನಿಕರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ. ದಿನಾಂಕ 06.04.2018 ರಂದು ನಾನು ಮತ್ತು ಸಿಬ್ಬಂದಿಯವರು ಮತ್ತು ಪಂಚ ಜನರು ಕೂಡಿಕೊಂಡು ದೊಡ್ಡ ಅಗಸಿ ಗಿರಣಿಯ ಪಕ್ಕ ರೆಡಗೆಂದು ಹೋಗಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ಸೇಡಂ ರಹವಾಸಿ ಅಲ್ಲ ಎಂದರೆ ಸರಿಯಲ್ಲ. ಆರೋಪಿತರ ಸ್ವಾಧಿನದಿಂದ 25 ಸೇಂದಿ ಪಾಕೇಟುಗಳನ್ನು ಜಪ್ತುಪಡಿಸಿಕೊಂಡಿರುವುದಾಗಿ ಮತ್ತು ಅದರಲ್ಲಿಂದ 1 ಸೇಂದಿ ಪಾಕೇಟನ್ನು ಪಂಚರ ಸಮಕ್ಷಮ ರಾಸಾಯನಿಕ ಪರೀಕ್ಷೆ ಸಲುವಾಗಿ ಪಡೆದುಕೊಂಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ದಾಳಿಗೆಂದು ಒಂದು ಖಾಸಗಿ ವಾಹನದಲ್ಲಿ ಹೋಗಿರುವುದಾಗಿ ಹೇಳಿದ್ದು ಆ ವಾಹನಕ್ಕೆ ನಂಬರ ಇರಲಿಲ್ಲ.ಆ ದಿವಸ ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ, ನಮ್ಮ ಹಿರಿಯ ಅಧಿಕಾರಿಗಳ ಮಾತುಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.ಗೂ ಆರೋಪಿಗೂ ಏನು ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.) ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ. ದ. ನ್ಯಾ ದಂ. ಸೇಡಂ.

*SYH